**ಸಾಕ್ಷಿಯನ್ನು ದಿನಾಂಕ 07-04-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಐ.ಎಂ.ಹೆಚ್ ವಕೀಲರಿಂದಃ**

1. ನಾನು 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಿ.ಪಿ.–17 ರ ದಾಖಲೆಯನ್ನು ಲೆಕ್ಕಪರಿಶೋಧಕರು ಕೊಟ್ಟಿದ್ದಾರೆ. ನಿ.ಪಿ.–17 ರ ದಾಖಲೆ ಪಡೆಯುವ ಸಲುವಾಗಿ ಲೆಕ್ಕಪರಿಶೋಧಕರ ಮುಂದೆ ಮಸೀದಿಗೆ ಸಂಬಂಧಪಟ್ಟ ಮೂಲ ಬಿಲ್ ಪುಸ್ತಕಗಳು ಹಾಗೂ ಇತರೆ ಲೆಕ್ಕ ಪತ್ರವನ್ನು ಹಾಜರುಪಡಿಸಿದ್ದೆ. 2019 ರಲ್ಲಿ ಸದರಿ ದಾಖಲೆಯನ್ನು ಸಲ್ಲಿಸುವ ಸಂದರ್ಭದಲ್ಲಿ 1 ನೇ ಪ್ರತಿವಾದಿ ಮಸೀದಿಯ ಅಧ್ಯಕ್ಷರಾಗಿದ್ದರು ಜೆ.ಬಾಷಾ ಎಂಬುವವರು ಕಾರ್ಯದರ್ಶಿಯಾಗಿದ್ದರು ಎಂದರೆ ಸರಿ. ನಿ.ಪಿ.–17 ರ ದಾಖಲೆಗೆ ಅಧ್ಯಕ್ಷರು, ಕಾರ್ಯದರ್ಶಿ ಅಥವಾ ಖಜಾಂಚಿಯವರ ಸಹಿ ಇಲ್ಲ ಎಂದರೆ ಸರಿ. ನಿ.ಪಿ.–17 ರ ದಾಖಲೆ ಪಡೆದುಕೊಳ್ಳಲು ಲೆಕ್ಕಪರಿಶೋಧಕರ ಮುಂದೆ ಹಾಜರುಪಡಿಸಲಾಗಿತ್ತು ಎನ್ನಲಾದ ಮೂಲ ಬಿಲ್ ಪುಸ್ತಕಗಳು ಹಾಗೂ ಲೆಕ್ಕ ಪತ್ರ ದಾಖಲೆಗಳು ಈಗ ನನ್ನ ಬಳಿಯೇ ಇದೆ. ಸದರಿ ಮೂಲ ದಾಖಲೆಗಳ ಮೇಲೆ ಅದನ್ನು ಪರಿಶೀಲನೆ ಮಾಡಿದ ಲೆಕ್ಕಪರಿಶೋಧಕರ ಸಹಿಗಳು ಇದೆ. ಸದರಿ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. ಅವುಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

2. ನಿ.ಪಿ.–21 ರ ನೋಟಿಸನ್ನು ವಕ್ಫ್ ಮಂಡಳಿಯವರು ನನಗೆ, 1 ನೇ ಪ್ರತಿವಾದಿ ಮತ್ತು ಕಾರ್ಯದರ್ಶಿಯಾಗಿದ್ದ ಜೆ.ಬಾಷಾ ರವರಿಗೆ ಕೊಟ್ಟಿದ್ದರು ಎಂದರೆ ಸರಿ. ಜೆ.ಬಾಷಾ

ಕಾರ್ಯದರ್ಶಿಯಾಗಿದ್ದಾಗ 1 ನೇ ಪ್ರತಿವಾದಿಯೇ ಮಸೀದಿಯ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಜಿ.ಬಾಷಾ ರವರು ಕಾರ್ಯದರ್ಶಿಯಾಗಿದ್ದ ನಿಖರ ಅವಧಿ ಹೇಳಬಹುದೇ ಎಂಬ ಪ್ರಶ್ನೆಗೆ ಸಾಕ್ಷಿ 05.01.2018 ರಿಂದ 21.06.2018 ರವರೆಗೆ ನಾನು ಉಪಾಧ್ಯಕ್ಷನಾಗಿದ್ದೆ ಮತ್ತು ಅದೇ ಅವಧಿಯಲ್ಲಿ ಜಿ.ಬಾಷಾ ಕಾರ್ಯದರ್ಶಿಯಾಗಿದ್ದರು ಎನ್ನುತ್ತಾರೆ. ಜಿ.ಬಾಷಾ ರವರು 2 ನೇ ಪ್ರತಿವಾದಿಯಿಂದ ಕಾರ್ಯದರ್ಶಿಯಾಗಿ ಅಧಿಕಾರವನ್ನು ವಹಿಸಿಕೊಂಡಿದ್ದರು ಎಂದರೆ ಸಾಕ್ಷಿ ಒಬ್ಬರಿಗೆ ಅಧಿಕಾರ ವಹಿಸಿಕೊಡಲು ನಿಯಮವಿಲ್ಲ, ನಿರ್ಗಮಿತ ಕಾರ್ಯದರ್ಶಿ ಮಸೀದಿಯ ಸಮಿತಿ ಸದಸ್ಯರಿಗೆ ಅಧಿಕಾರವನ್ನು ವರ್ಗಾಯಿಸಬೇಕು, ಹೊಸದಾಗಿ ನೇಮಕವಾದ ಕಾರ್ಯದರ್ಶಿಗೆ ವರ್ಗಾಯಿಸುವಂತಿಲ್ಲ ಎನ್ನುತ್ತಾರೆ. ಸಾಕ್ಷಿ ಪುನಃ ಜಿ.ಬಾಷಾ ರವರಿಗೆ ಅಧಿಕಾರ ವಹಿಸಿಕೊಟ್ಟಂತೆ ದಾಖಲೆಯನ್ನು 2 ನೇ ಪ್ರತಿವಾದಿ ಸೃಷ್ಟಿಮಾಡಿದ್ದಾರೆ ಎನ್ನುತ್ತಾರೆ.

3. ಈಗ ನನಗೆ ತೋರಿಸಲಾದ ದಾಖಲೆಯೂ ಜಿ.ಬಾಷಾ ರವರಿಗೆ 2 ನೇ ಪ್ರತಿವಾದಿಯೂ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಟ್ಟ ಪತ್ರ ಆಗಿದೆ ಹಾಗೂ ಸದರಿ ದಾಖಲೆಯಲ್ಲಿ ಜಿ.ಬಾಷಾ ಹಾಗೂ 2 ನೇ ಪ್ರತಿವಾದಿಯ ಸಹಿಗಳು ಇದೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಗಳನ್ನು **<u>ನಿಡಿ-1 ಮತ್ತು 2</u>** ಎಂದು ಗುರುತಿಸಲಾಯಿತು. ನಿಡಿ-1 ರ ದಾಖಲೆಗಳಲ್ಲಿ ಲೆಕ್ಕಪರಿಶೋಧಕರ ಸಹಿ ಮತ್ತು ಮೊಹರು ಸಹ ಇದೆ ಎಂದರೆ ಸರಿ.

4. ಸಾಕ್ಷಿಗೆ ಮತ್ತೊಂದು ದಾಖಲೆ ತೋರಿಲಾಯಿತು. ಈಗ ನನಗೆ ತೋರಿಸಲಾದ ದಾಖಲೆ

ಸರ್ಕಾರದಿಂದ ಮಂಜೂರಾದ ಹಣವನ್ನು ಮಸೀದಿ ಕಟ್ಟಡ ಕಾಮಗಾರಿಕೆ ಬಳಸಿಕೊಂಡ ಬಗ್ಗೆ ಜಿಲ್ಲಾ ವಕ್ಫ್ ಅಧಿಕಾರಿಗಳಿಗೆ ಮಸೀದಿಯ ಅಧ್ಯಕ್ಷರು ಸಲ್ಲಿಸಿದ್ದ ಕಾಮಗಾರಿ ಬಳಕೆ ಪ್ರಮಾಣ ಪತ್ರ ಹಾಗೂ ಅದರ ಜೊತೆ ಲಗತ್ತಿಸಲಾಗಿರುವ ಫೋಟೋಗಳು ಎಂದರೆ ಸರಿ. ಸಾಕ್ಷಿ ಪುನಃ ಸದರಿ ದಾಖಲೆಗಳಿಗೆ ನಾನು ಸಹಿ ಮಾಡಿಲ್ಲ ಮತ್ತು ಹಳೆ ಕಾಮಗಾರಿ ಫೋಟೋ ತೆಗೆದು ಪ್ರತಿವಾದಿಯರು ಬಳಕೆ ಪ್ರಮಾಣ ಪತ್ರ ದಾಖಲೆ ಸೃಷ್ಟಿಮಾಡಿದ್ದಾರೆ ಎನ್ನುತ್ತಾರೆ. ಸಾಕ್ಷಿ ಒಪ್ಪಿಕೊಂಡ ಪತ್ರ ಹಾಗೂ ಅದಕ್ಕೆ ಲಗತ್ತಿಸಲಾಗಿರುವ ಫೋಟೋಗಳನ್ನು ಕ್ರಮವಾಗಿ **ನಿಡಿ–3 ರಿಂದ 6** ಎಂದು ಗುರುತಿಸಲಾಯಿತು.

5. ದಿನಾಂಕ 23.09.2020 ರಂದು ಜಿಲ್ಲಾ ವಕ್ಫ್ ಬೋರ್ಡ್ ಸಮಿತಿಯ ಅಧ್ಯಕ್ಷರಾಗಿದ್ದ ಅಬ್ದುಲ್ ಘನಿ ಮತ್ತು ಆಗಿನ ಜಿಲ್ಲಾ ವಕ್ಫ್ ಅಧಿಕಾರಿ ಮದನ್ ಪಟೇಲ್ ರವರು 1 ನೇ ಪ್ರತಿವಾದಿಯಿಂದ ಮಸೀದಿಗೆ ಸಂಬಂಧಪಟ್ಟ ಮೂಲ ನಿಕ್ಕಾನಾಮ ಪುಸ್ತಕಗಳು ಬಿಲ್ ಪುಸ್ತಕಗಳು, ಜಂದಾ ಪುಸ್ತಕಗಳು ಹಾಗೂ ಇತರೆ ಲೆಕ್ಕ ಪತ್ರಗಳನ್ನು ಪಡೆದುಕೊಂಡು ಅದನ್ನು ನನಗೆ ಹಸ್ತಾಂತರಿಸಿದ್ದಾರೆ ಎಂದರೆ ಸರಿ. ಈಗ ನನಗೆ ತೋರಿಸಲಾದ ಸದರಿ ದಿನ ಬರೆಯಲಾಗಿದ್ದ ಮಹಜರ್ ಆಗಿದ್ದು ಸದರಿ ಮಹಜರ್ ನಲ್ಲಿ ನಮೂದಿಸಲಾಗಿರುವ ಎಲ್ಲಾ ಮೂಲ ದಾಖಲೆಗಳನ್ನು 1 ನೇ ಪ್ರತಿವಾದಿಯಿಂದ ನನಗೆ ಹಸ್ತಂತರಿಸಲಾಗಿತ್ತು ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು **ನಿಡಿ–7** ಎಂದು ಗುರುತಿಸಲಾಯಿತು. ಸಾಕ್ಷಿ ಸ್ವ ಇಚ್ಚೆಯಿಂದ ಇನ್ನಷ್ಟು ಮೂಲ ದಾಖಲೆಗಳು ವಕ್ಫ್ ಅಧಿಕಾರಿಗಳಿಗೆ ಸಿಕ್ಕಿಲ್ಲ ಹಾಗೂ ಅವುಗಳು ಕಳೆದು ಹೋಗಿದೆ ಎಂದು 1 ನೇ ಪ್ರತಿವಾದಿ ಹೇಳಿದ್ದರು ಎನ್ನುತ್ತಾರೆ.

6. ನಿ.ಪಿ.–2 ಮತ್ತು 3 ರಂತೆ ಹಳೆ ನಗರ ಪೊಲೀಸರಿಗೆ ನಾನು ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ಹಾಗೂ ಪ್ರತಿವಾದಿಯರನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿ ರಾಜಿ ಮಾಡಿಸಿ ಕಳುಹಿಸಿದ್ದರು ಎಂದರೆ ಸಾಕ್ಷಿ ದೂರಿನಲ್ಲಿ ನಾನು ಹೇಳಿರುವ ವಿಷಯಗಳು ಸಿವಿಲ್ ಸ್ವರೂಪದಾಗಿದ್ದು ನ್ಯಾಯಾಲಯದಲ್ಲಿ ತೀರ್ಮಾನ ಮಾಡಿಕೊಳ್ಳುವಂತೆ ಪೊಲೀಸರು ಹೇಳಿದರು ಎನ್ನುತ್ತಾರೆ.

7. ಈ ಹಿಂದೆ ಕಾರ್ಯದರ್ಶಿಯಾಗಿದ್ದ ಜಿ.ಬಾಷಾ ರವರು ಲೆಕ್ಕ ಪತ್ರದ ದಾಖಲೆಗಳನ್ನು ಹಸ್ತಂತರಿಸಿಲ್ಲ ಎಂದು 1 ನೇ ಪ್ರತಿವಾದಿ ಅವರ ವಿರುದ್ಧ ಭದ್ರಾವತಿಯ 1 ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**